**ದಿನಾಂಕ:23.11.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು: ಮಾನ್ಯ ಆರೋಪಿ ಪರ ವಕೀಲರಿಂದ:–**

43. ನಾನು ಮೂಲತಃ ಕೆಬ್ಬೆ ಹುಂಡಿ, ಸೋಸಲೆ ಹೋಬಳಿ, ಟಿ.ನರಸೀಪುರ ತಾಲ್ಲೂಕಿನವನು ಎಂದರೆ ಸರಿ. ಡಿ.ನಿಂಗರಾಜು ತಂದೆ ದೊಡ್ಡಮಾದಯ್ಯ, ಕೆಬ್ಬೆ ಹುಂಡಿ, ಸೋಸಲೆ ಹೋಬಳಿ, ಟಿ.ನರಸೀಪುರ ತಾಲ್ಲೂಕು ಎಂದರೆ ನಾನು ಎಂದರೆ ಸರಿ. ಕಂದಾಯ ನಿರೀಕ್ಷಕರು ಸ್ಥಳ ಪರಿಶೀಲನೆಗೆ ಬಂದಾಗ ಸಿಸ್ಟರ್.ಥೆರೇಸಾರವರು ಇಟಲಿಯಲ್ಲಿದ್ದರು ಎಂದರೆ ಅವರು ಎಲ್ಲಿದ್ದರು ಎಂದು ನನಗೆ ತಿಳಿದಿಲ್ಲ ಎಂದು ಹೇಳುತ್ತಾರೆ. ಹಾಗೆ ಸ್ಥಳ ಪರಿಶೀಲನೆಗೆ ಕಂದಾಯ ನಿರೀಕ್ಷಕರು ಬಂದ 5 ತಿಂಗಳು ಮೊದಲು ಕೊನೆಯ ಬಾರಿ ನಾನು ಸಿಸ್ಟರ್.ಥೆರೇಸಾರವರನ್ನು ಭೇಟಿಯಾಗಿದ್ದೆನು. ಸ್ಥಳ ಪರಿಶೀಲನೆ ಆದ 1 ವಾರದ ನಂತರ ಸಿಸ್ಟರ್.ಥೆರೇಸಾರವರನ್ನು ನಾನು ಭೇಟಿಯಾಗಿದ್ದೆನು. ಹಾಗೆ ಭೇಟಿಯಾದ ದಿನಾಂಕವನ್ನು ಹೇಳಲು ಆಗುವುದಿಲ್ಲ. ದೂರು ಕೊಡು 4 ದಿನಗಳ ಮೊದಲು ನಾನು ಸಿಸ್ಟರ್.ಥೆರೇಸಾರವರನ್ನು ಕೊನೆಯದಾಗಿ ಭೇಟಿಯಾಗಿದ್ದು ಈ 4 ದಿವಸದ ಅವಧಿಯಲ್ಲಿ ಅವರು ಭೇಟಿಯಾಗಿರುವುದಿಲ್ಲ.

44. ಭೂಸುಧಾರಣೆ ಕಾಯ್ದೆಯ ಕಲಂ 109ರ ಅಡಿ ಸಂಸ್ಥೆಗೆ ಸಂಬಂಧಪಟ್ಟ ಭೂಮಿಯನ್ನು ಭೂಪರಿವರ್ತನೆ ಮಾಡಲು ಆಗುವುದಿಲ್ಲ ಎಂದರೆ ನನಗೆ ತಿಳಿದಿಲ್ಲ ಎಂದು ಹೇಳುತ್ತಾರೆ. ನಾನು ಸಿಸ್ಟರ್.ಥೆರೇಸಾರವರ ಕೆಲಸಗಾರನಲ್ಲ. ದೂರು ಕೊಡುವ 1 ವರ್ಷದ ಹಿಂದೆ ನನಗೆ ಸಿಸ್ಟರ್.ಥೆರೇಸಾರವರು ಭೂಪರಿವರ್ತನೆ ಮಾಡಲು ಯಾವುದೇ ಅಧಿಕಾರ ಪತ್ರವನ್ನು ಕೊಟ್ಟಿರಲಿಲ್ಲ. ನಾನು ಭೂಪರಿವರ್ತನೆ ಮಾಡಲು ಪ್ರಯತ್ನಿಸುತ್ತಿದ್ದ ಜಮೀನಿನ ಸರ್ವೇ ನಂಬರ್ ನನಗೆ ತಿಳಿದಿಲ್ಲ. ಸದರಿ ಜಮೀನು ಸಿಸ್ಟರ್.ಥೆರೇಸಾರವರ ಹೆಸರಿನಲ್ಲಿತ್ತು. ಸದರಿ ಜಮೀನು Society of Carmalites, Terressians Sisters in India, Mysuru ಇವರ ಪರ ಸಿಸ್ಟರ್.ಥೆರೇಸಾರವರ ಹೆಸರಿನಲ್ಲಿತ್ತು ಎಂದರೆ ಸರಿ. ಆ ಸಂಸ್ಥೆಯಲ್ಲಿ ಯಾರ್ಯಾರು ಸಂಬಂಧಪಟ್ಟವರು ಇದ್ದರು ಎಂದು ನನಗೆ ತಿಳಿದಿಲ್ಲ.

45. ನಾನು ನನ್ನ ಜೀವನೋಪಾಯಕ್ಕಾಗಿ ನನ್ನ ಜಮೀನಿನಿಂದ ಬರುವ ಆದಾಯವನ್ನು ಅವಲಂಬಿಸಿರುತ್ತೇನೆ. ನಾನು ಹಿಂದಿನ ದಿನಾಂಕದಂದು ಆದ ಪಾಟೀಸವಾಲಿನಲ್ಲಿ ನನಗೆ ಯಾವುದೇ ಜಮೀನು ಇಲ್ಲ ಎಂದು ಹೇಳಿದ್ದು ಸರಿ ಇರುತ್ತದೆ. ಸಾಕ್ಷಿಗೆ ಮೇಲೆ ಹೇಳಿದ ಜಮೀನು ಯಾವುದು ಎಂದು

ನ್ಯಾಯಾಲಯವು ಪ್ರಶ್ನಿಸಿದಾಗ ಅದು ನನ್ನ ಹೆಂಡತಿಯ ಹೆಸರಿನಲ್ಲಿರುವ ಜಮೀನು ಎಂದು ಹೇಳುತ್ತಾರೆ. ಸದರಿ ಜಮೀನ ಸರ್ವೇ ನಂ. 3/1, 4/1, ಹೊಸಪುರ ಗ್ರಾಮ, ಮೂಗೂರು ಹೋಬಳಿ, ಟಿ.ನರಸೀಪುರ ತಾಲ್ಲೂಕು. ಅದರ ವಿಸ್ತೀರ್ಣ 37 ಗುಂಟೆ ಮತ್ತು 3 ಗುಂಟೆ ಇರುತ್ತದೆ. ಅದರಲ್ಲಿ ಭತ್ತ ಬೆಳೆಯುತ್ತೇನೆ. ನನ್ನ ಹೆಂಡತಿಯ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

46. ನಾನು ಸಿಸ್ಟರ್.ಥೆರೇಸಾರವರಿಂದ ಭೂಪರಿವರ್ತನೆ ಖರ್ಚಿಗೆ ಸಂಬಂಧಪಟ್ಟಂತೆ ರೂ.2,000/– ಮತ್ತು ರೂ.3,000/–ದಂತೆ ಪಡೆಯುತ್ತಿದ್ದೆ. ಸದರಿ ಹಣವನ್ನು ಪಡೆದ ಬಗ್ಗೆ ಅವರಿಗೆ ರಶೀದಿಯನ್ನು ಕೊಟ್ಟಿಲ್ಲ. ಅವರಿಗೆ ಮೋಸ ಮಾಡಿ ಸದರಿ ಸಂಸ್ಥೆಯಿಂದ ರೂ.2,50,000/– ರಿಂದ ರೂ.3,00,000/– ಕಿತ್ತುಕೊಂಡಿದ್ದೇನೆ ಎಂದರೆ ಸರಿಯಲ್ಲ.

47. ನನಗೆ ಸಿಸ್ಟರ್.ಥೆರೇಸಾರವರ ಸಹಿಯನ್ನು ಗುರುತು ಹಿಡಿಯಬಹುದು. ನಿಪಿ–14 ಪುಟಸಂಖ್ಯೆ 167 ರಲ್ಲಿ ಅವರ ಸಹಿ ಇರುತ್ತದೆ. ಭೂಪರಿವರ್ತನೆಗೆ ಮೊದಲ ಬಾರಿ ಅರ್ಜಿಯನ್ನು ದಿಃ17.05.2017 ರಂದು ಕೊಡಲಾಗಿದೆ ಎಂದರೆ ಸರಿ. ಸದರಿ ಅರ್ಜಿಯನ್ನು ನಾನು ದೂರು ಕೊಡುವ 2 ತಿಂಗಳ ಮೊದಲು ಕೊಡಲಾಗಿದೆ ಎಂದರೆ ಸರಿ. ಹಾಗೆಯೇ ನಿಪಿ–14 ರ ಪು.ಸಂ.201, 203, 209, 242, 243 ರಲ್ಲಿ ಸಹ ಅವರ ಸಹಿಗಳು ಇರುತ್ತದೆ ಎಂದರೆ ಸರಿ. ನಿಪಿ–14 ರ ಪು.ಸಂ.164 ರಲ್ಲಿ ಹಾಗೂ ನಿಪಿ–1 ರಲ್ಲಿ ಇರುವ ಸಹಿಗಳಿಗೂ ಮತ್ತು ಮೇಲೆ ಹೇಳಿದ ಸಹಿಗಳಿಗೂ ವ್ಯತ್ಯಾಸವಿರಬಹುದು ಎಂದರೆ ಇರಬಹುದು. ನಿಪಿ–1 ದಾಖಲೆಯಲ್ಲಿರುವ ಸಹಿಯನ್ನು ನಾನು ದೂರು ಕೊಟ್ಟ ನಂತರ ಎಸಿಬಿ ಪೊಲೀಸರು ಅವರಿಂದ ಸದರಿ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಗೆ ನಿಪಿ–1 ದಾಖಲೆಯನ್ನು ಪುನಃ ತೋರಿಸಿ ಈ ಬಗ್ಗೆ ಉತ್ತರವನ್ನು ಕೊಡಬೇಕು ಎಂದು ನ್ಯಾಯಾಲಯವು ಸೂಚಿಸಿದಾಗ ಸಾಕ್ಷಿಯು ಸದರಿ ದಾಖಲೆಯನ್ನು ಪುನಃ ನೋಡಿ ಅದೇ ಉತ್ತರವನ್ನು ಕೊಟ್ಟಿರುತ್ತಾರೆ. ದೂರು ಕೊಟ್ಟ ಮಾರನೆಯ ದಿನ ಸದರಿ ಸಹಿಯನ್ನು ಪಡೆಯಲಾಯಿತು. ನಿಪಿ–1 ನ್ನು ನಾನು ಹೇಳುವಂತೆ ಎಸಿಬಿ ಪೊಲೀಸರು ಸಹಿಯನ್ನು ಮಾಡಿಸಿಲ್ಲ ಸದರಿ ಸಹಿಯನ್ನು ನಾನೇ ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ13.07.2017 ರಂದು ಸಿಸ್ಟರ್.ಥೆರೇಸಾರವರು ಇಟಲಿಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ.

ಆರೋಪಿಗೆ ಅವಮಾನ ಮತ್ತು ತೊಂದರೆ ಮಾಡಬೇಕು ಎಂಬ ಕಾರಣಕ್ಕೆ ನಿಪಿ–1ನ್ನು ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–1ರ ಚಾಪಾ ಕಾಗದವನ್ನು ನಾನೇ ಖರೀದಿಸಿರುತ್ತೇನೆ. ಸದರಿ ಚಾಪಾ ಕಾಗದವನ್ನು ನಾನೇ ಖರೀದಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–14ರ ಪು.ಸಂ.164ರಲ್ಲಿರುವ ಸಹಿಯನ್ನು ಸಿಸ್ಟರ್.ಥೆರೇಸಾರವರು ಯಾವಾಗ ಮಾಡಿಸಿದ್ದು ಎಂದು ನನಗೆ ತಿಳಿದಿಲ್ಲ. ಸದರಿ ಸಹಿಯನ್ನು ಸಹ ನಾನು ಫೋರ್ಜರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

48. ನಾನು ಸುಳ್ಳು ದೂರನ್ನು ನೀಡಿ ನಂತರ ಅವರೊಡನೆ ವ್ಯವಹಾರ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುವ ಉದ್ಯೋಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಡಿ–1ಕ್ಕೆ ಸಂಬಂಧಪಟ್ಟಂತೆ ನಾನು ಆರೋಪಿಯೊಂದಿಗೆ ವ್ಯವಹಾರ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಮತ್ತು ಅಲ್ಲಿಯೂ ಸಹ ನನ್ನನ್ನೂ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ ಎಂದರೆ ಸರಿಯಲ್ಲ.

49. ಸರ್ಕಾರಿ ಅಧಿಕಾರಿಗಳ ವಿರುದ್ಧ ಉಪಲೋಕಾಯುಕ್ತರಿಗೆ 5ರಿಂದ 6 ದೂರಗಳನ್ನು ಕೊಟ್ಟಿರುತ್ತೇನೆ. ಶಿವಲಿಂಗೇಗೌಡ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಟಿ.ನರಸೀಪುರ ಇವರ ವಿರುದ್ಧ ಕೊಟ್ಟ ದೂರು ಸಂಖ್ಯೆ53/2003 ಆಗಿರುತ್ತದೆ ಎಂದರೆ ಸರಿ. ಹಾಗೆಯೇ ನಾನು ಶರ್ಮ, ರಾಜಸ್ವ ನಿರೀಕ್ಷಕರು ಅಧಿಕಾರಿಗಳು, ಕಂದಾಯ ಇಲಾಖೆ, ಟಿ.ನರಸೀಪುರ ಇವರ ವಿರುದ್ಧ ಕೊಟ್ಟ ದೂರು ಸಂಖ್ಯೆ191/2003 ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ದೂರುಕೊಟ್ಟದ್ದು ಸರಿಯಿರುತ್ತದೆ ಆದರೆ ಹೆಸರು ಬೇರೆಯಾಗಿದೆ ಎಂದು ಹೇಳುತ್ತಾರೆ. ಹಾಗೆಯೇ ಗ್ರಾಮ ಲೆಕ್ಕಿಗರು, ಟಿ.ನರಸೀಪುರ ಇವರ ವಿರುದ್ಧ ಕೊಟ್ಟ ದೂರು ಸಂಖ್ಯೆ 1208/2003 ಮತ್ತು ಶಿವಲಿಂಗೇಗೌಡ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಟಿ.ನರಸೀಪುರ ಇವರ ವಿರುದ್ಧ ಕೊಟ್ಟ ದೂರು ಸಂಖ್ಯೆ 1209ಮತ್ತು 1212/2003 ಆಗಿರುತ್ತದೆ ಎಂದರೆ ಸರಿ. ಸಹಾಯಕ ನಿರ್ದೇಶಕರು, ಮೀನುಗಾರಿಕ ಇಲಾಖೆ, ಟಿ.ನರಸೀಪುರ ಇವರ ವಿರುದ್ಧ ಕೊಟ್ಟ ದೂರು ಸಂಖ್ಯೆ 2182/2003 ಆಗಿರುತ್ತದೆ ಎಂದರೆ ಸರಿ. ಈ ಅಧಿಕಾರಿಗಳ ವಿರುದ್ದ ದೂರು ನೀಡಿ ನಂತರ ಅವರೊಡನೆ ವ್ಯವಹಾರ ಮಾಡಿ ನಂತರ ವ್ಯತಿರಿಕ್ತವಾಗಿ ಹೇಳಿಕೆ ಕೊಟ್ಟು ಸದರಿ ದೂರುಗಳು ಮುಕ್ತಾಯಗೊಂಡಿವೆ ಎಂದರೆ ಸರಿಯಲ್ಲ.

50. ಹಾಗೆಯೇ ಪ್ರತಿವರ್ಷ ಸರ್ಕಾರಿ ಅಧಿಕಾರಿಗಳ ಮೇಲೆ ದೂರುಗಳನ್ನು ಕೊಡುತ್ತಾ ಬಂದಿದ್ದೇನೆ ಎಂದರೆ ಸರಿಯಲ್ಲ. ಹಾಗೆ ದೂರು ಕೊಟ್ಟು ಅವರಿಂದ ಹಣವನ್ನು ಪಡೆಯುವುದು ನನ್ನ ಉದ್ಯೋಗ ಎಂದರೆ ಸರಿಯಲ್ಲ. ನಾನು ನೀಡಿದ ದೂರನ್ನು ಎಸಿಬಿ ಕಛೇರಿಯಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಹಾಗೆಯೇ ನಿಪಿ-13 ಮಹಜರಿನಲ್ಲಿ ಹೇಳಿದಂತೆ ಯಾವುದೇ ಪ್ರಕ್ರಿಯೆಗಳು ನಡೆದಿಲ್ಲ ಅದನ್ನು ನನ್ನ ಒತ್ತಾಯಕ್ಕೆ ಮಾಡಲಾಗಿದೆ ಎಂದರೆ ಸರಿಯಲ್ಲ.

51. ನಾನು ತೆಗೆದುಕೊಂಡು ಹೋದ ರೆಕಾರ್ಡ್ ಮಾಡಿದ ಸಂಭಾಷಣೆಯಲ್ಲಿ ರೂ.50,000/- ರ ಬಗ್ಗೆ ಕೇಳಿದ ಬಗ್ಗೆ ರೆಕಾರ್ಡ್ ಆಗಿಲ್ಲ. ಸಾಕ್ಷಿಯು ರೂ.40,000/-ಕೊಟ್ಟ ಬಗ್ಗೆ ರೆಕಾರ್ಡ್ ಆಗಿರುತ್ತದೆ. ನನಗೆ ಮುಂಗಡವಾಗಿ ರೂ.15,000/- ಕೊಡು ಎಂದು ಕೇಳಿದ ಬಗ್ಗೆ ರೆಕಾರ್ಡ್ ಆಗಿತ್ತೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಾನು ರೂ.15,000/- ಕೊಡುತ್ತೇನೆ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದು ರೆಕಾರ್ಡ್ ಆಗಿರುತ್ತದೆ. ನಾನು ಹೇಳುವಂತೆ ಅಂತಹ ಯಾವುದೇ ರೆಕಾರ್ಡಿಂಗ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮೈಸೂರಿನ ತಹಸೀಲ್ದಾರ್ ಕಛೇರಿಯಲ್ಲಿ ಆರೋಪಿಗೆ ಸೇರಿದ ಯಾವುದೇ ಕಛೇರಿಯಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ದೂರು ಕೊಡುವ ಮೊದಲು ನನಗೆ ಇಂತಹ ಸ್ಥಳದಲ್ಲಿ ಬಂದು ಹಣ ಕೊಡಬೇಕು ಎಂದು ಕೇಳಿರುವುದಿಲ್ಲ. ನಾನು ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ಹೇಳಲಾದ ಮೊಬೈಲ್ ನಂ. ಹಾಗೂ ಅದರ ಮೆಮೊರಿ ಕಾರ್ಡು ಯಾವ ಕಂಪನಿಗೆ ಸೇರಿದ್ದು ಎಂದು ದೂರಿನಲ್ಲಿ ಹೇಳಿರುವುದಿಲ್ಲ. ನಿಪಿ-13 ರಲ್ಲಿ ನನ್ನ ಮೊಬೈಲ್ ನಂಬರನ್ನು ಬರೆಯಲಾಗಿದೆ. ನಾನು ಹಾಜರು ಪಡಿಸಿರುವ ಮೊಬೈಲ್ ಸಂಭಾಷಣೆ ನನ್ನ ಮತ್ತು ಆರೋಪಿಯ ನಡುವೆ ನಡೆದಿಲ್ಲ ಮತ್ತು ನಾನೇ ಅದನ್ನು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

52. ನಿಪಿ-13 ನ್ನು ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಬರೆದಿರುತ್ತಾರೆ. ಎಸಿಬಿ ಪೊ.ಠಾಣೆಯನ್ನು ಮಧ್ಯಾಹ್ನ 2.15 ಗಂಟೆಗೆ ಬಿಟ್ಟಿರುತ್ತೇವೆ. ತಾಲ್ಲೂಕು ಕಛೇರಿ ತಲುಪಿದಾಗ ಮಧ್ಯಾಹ್ನ 3.00 ರಿಂದ 3.30 ಗಂಟೆ ಸಮಯವಾಗಿತ್ತು. ನಾನು ಮೋಟಾರು ಸೈಕಲಿನಲ್ಲಿ ಮತ್ತು ಎಸಿಬಿ ಪೊಲೀಸರು ಜೀಪಿನಲ್ಲಿ ಬಂದಿರುತ್ತಾರೆ. ನಾನು ಇಲಾಖಾ ವಾಹನದಲ್ಲಿ ತಾಲ್ಲೂಕು ಕಛೇರಿಗೆ ಹೋಗಿರುವುದಿಲ್ಲ. ನಿಪಿ-15 ನ್ನು ಸಂಜೆ 4.00 ಗಂಟೆಯಿಂದ ಮಧ್ಯರಾತ್ರಿ 12.00 ಗಂಟೆಯವರೆಗೂ

ಬರೆದಿರುತ್ತೇವೆ.ನಾನು ಆರೋಪಿಗೆ ಹಣವನ್ನು ಕೊಟ್ಟಾಗ ಮಧ್ಯಾಹ್ನ 3.30 ಗಂಟೆಯಾಗಿತ್ತು. ಪೊಲೀಸರು ನನ್ನ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ನಾನು ನನ್ನ ಹೇಳಿಕೆ ನಿಪಿ-17 ರ ಪು.ಸಂ.255 ರಲ್ಲಿ ಈಗ ನನಗೆ ಓದಿ ಹೇಳಿದಂತೆ "ನಂತರ ತನಿಖಾಧಿಕಾರಿಯವರು ------ ವಾಹನ ಸಂ. KA04-1372 ರಲ್ಲಿ" ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದು ನನಗೆ ನೆನಪಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು.

53. ಆರೋಪಿಯು ನನ್ನಿಂದ ರೂ.40,000/- ಕೇಳಿದ್ದು ಟ್ರಾಪ್ ಸಮಯದಲ್ಲಿ ಮಾಡಿದ ವಾಯ್ಸ್ ರೆಕಾರ್ಡ್ನಲ್ಲಿ ದಾಖಲಾಗಿದೆ. ಹಾಗೆಯೇ ಆರೋಪಿಯು ಆದಷ್ಟು ಬೇಗ ರಿಪೋರ್ಟ್ ನೀಡುತ್ತೇನೆ ಎಂದು ಹೇಳಿದ್ದು ವಾಯ್ಸ್ ರೆಕಾರ್ಡ್ನಲ್ಲಿ ದಾಖಲಾಗಿದೆಯೇ ಎಂಬ ಬಗ್ಗೆ ನನಗೆ ತಿಳಿದಿಲ್ಲ. ನಿಪಿ-15 ರ ಪು.ಸಂ.6 ಮತ್ತು 7 ರಲ್ಲಿ ಟ್ರಾಪ್ ಸಮಯದಲ್ಲಿ ಮಾಡಿದ ವಾಯ್ಸ್ ರೆಕಾರ್ಡರಿನಲ್ಲಿರುವ ಸಂಭಾಷಣೆಯಲ್ಲಿ ಹಾಗೇ ಆರೋಪಿಯು ರೂ.40,000/- ಕೇಳಿದ್ದಾರೆ ಎಂಬ ಬಗ್ಗೆ ಇರುವುದಿಲ್ಲ ಎಂದರೆ ಸರಿ. ನಾನು ಕೊಟ್ಟ ಹಣವನ್ನು ಆರೋಪಿಯು ಎಣಿಸಿ ತನ್ನ ಪ್ಯಾಂಟ್ ಜೇಬಿಗೆ ಹಾಕಿಕೊಂಡರು ಎಂದು ನಿಪಿ-15 ರಲ್ಲಿ ಬರೆಯಲಾಗಿದೆ. ನನ್ನ ಹೇಳಿಕೆಯಲ್ಲಿಯೂ ಸಹ ಆರೋಪಿಯು ಹಣವನ್ನು ಎಣಿಸಿ ಜೇಬಿಗೆ ಹಾಕಿಕೊಂಡರು ಎಂದು ಹೇಳಿರುತ್ತೇನೆ. ನಾನು ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಮತ್ತು ಮಹಜರಿನಲ್ಲಿ ಹೇಳಿರುವುದಿಲ್ಲ ಮತ್ತು ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

54. ಆರೋಪಿಯ 2 ಕೈಗಳನ್ನು ತೊಳೆಸಿದ ದ್ರಾವಣಕ್ಕೆ ಬಣ್ಣ ಬಂದಿರುತ್ತದೆ. ಈ ವಿಷಯವನ್ನು ಮಹಜರಿನಲ್ಲಿ ಬರೆಯಲಾಗಿದೆಯೇ ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂಬುವುದು ನನಗೆ ಗೊತ್ತಿಲ್ಲ. ಅಭಿಯೋಜನೆಯು ಮಾಡಿದ ಪಾಟೀಸವಾಲಿನಲ್ಲಿ ಅವರು ಕೇಳಿದ ಪ್ರಶ್ನೆಗಳಿಗೆ ನಾನು ಸರಿ ಎಂದು ಉತ್ತರ ನೀಡಿದ್ದು ಹಾಗೇ ನಾನು ಯಾವ ವಿಷಯಗಳ ಬಗ್ಗೆ ಸರಿಯೆಂದು ಹೇಳಿದ್ದೇನೆ ಎಂದು ನನಗೆ ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ತೊಳೆಸಿದ ಪ್ಯಾಂಟ್ ಯಾವ ಬಣ್ಣದು ಎಂದು ನನಗೆ ನೆನಪಿಲ್ಲ. ಜೇಬನ್ನು ತೊಳೆದ ತಕ್ಷಣ ಸದರಿ ಪ್ಯಾಂಟನ್ನು ಪ್ಯಾಕ್ ಮಾಡಿರುತ್ತಾರೆ. ಒದ್ದೆಯಾದ ಬಟ್ಟೆಯನ್ನು ಪ್ಯಾಕ್ ಮಾಡಿ ತುಂಬಾ ದಿನಗಳ ಕಾಲ ಇಟ್ಟಲ್ಲಿ ಸದರಿ ಭಾಗ ಬೂಸ್ಟು ಬಂದು ಹಾಳಾಗುತ್ತದೆ ಎಂದರೆ ಸರಿ. ಮು.ಮಾ.12

ಪ್ಯಾಂಟಿನ 2 ಜೇಬುಗಳು ಒಂದೇ ರೀತಿಯಲ್ಲಿ ಇವೆ ಎಂದರೆ ಸರಿ. ಸದರಿ 2 ಜೇಬುಗಳಿಗೂ ಯಾವುದೇ ಗುರುತು ಮಾಡಿರುವುದಿಲ್ಲ. ಧ್ರಾವಣದಿಂದ ತೊಳೆಸಿದಾಗ ಜೇಬುಗಳ ಬಣ್ಣ ಬದಲಾಗಿದೆಯೇ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಪ್ಯಾಂಟನ್ನು ತೊಳೆಸಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

55. ಅಲ್ಲಿ ರಮೇಶ್ ಬಾಬರವರು ಆರೋಪಿಯ ಧ್ವನಿ ಗುರುತಿಸಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತು ಪಡಿಸಿಕೊಂಡ ದಾಖಲೆಗಳನ್ನು ಕಂದಾಯ ನಿರೀಕ್ಷಕರ ಕಛೇರಿಯಿಂದ ತರಿಸಿ ಅಮಾನತು ಪಡಿಸಿಕೊಳ್ಳಲಾಯಿತು ಎಂದರೆ ಸರಿ. ನಾನು ಪೊಲೀಸರ ಮುಂದೆ ನಿಪಿ-17(ಎ) ಯಿಂದ (ಇ)ವರೆಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಮಹಜರುಗಳ ನಕಲುಗಳನ್ನು ಕೊಟ್ಟಿರುವುದಿಲ್ಲ. ದೂರು ಕೊಟ್ಟ ದಿನ ನಾನು ನೀಡಿದ ಹೇಳಿಕೆ ಬಿಟ್ಟು ಬೇರೆ ಯಾವುದೇ ಹೇಳಿಕೆಯನ್ನು ನಾನು ನೀಡಿಲ್ಲ. ಸದರಿ ಹೇಳಿಕೆಯನ್ನು ರಾತ್ರಿ 12.00 ಗಂಟೆಗೆ ಪಡೆದಿರುತ್ತಾರೆ. 15 ನೇ ತಾರೀಖಿನಂದು ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ನನಗೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಪೊಲೀಸರು ವಾಯ್ಸ್ ರೆಕಾರ್ಡರಲ್ಲಿ ಇದ್ದ ಸಂಭಾಷಣೆಯನ್ನು ಬೆರಳಚ್ಚು ಮಾಡಿಸಿಕೊಂಡಿರುತ್ತಾರೆ. 15 ನೇ ತಾರೀಖಿನಂದು ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಮತ್ತು ನನ್ನ ಹೇಳಿಕೆಯಲ್ಲಿ ಪೊಲೀಸರು ವಾಯ್ಸ್ ರೆಕಾರ್ಡರಲ್ಲಿ ಇದ್ದ ಸಂಭಾಷಣೆಯನ್ನು ಬೆರಳಚ್ಚು ಮಾಡಿಸಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

56. ನಾನು ನೋಡಿಕೊಳ್ಳುತಿದ್ದ ಮಕ್ಕಳನ್ನು ಸರ್ಕಾರಕ್ಕೆ ವಹಿಸಿಕೊಟ್ಟಿರುತ್ತೇನೆ. ನಾನು ಈಗ ಟಿ.ನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ವಿರುದ್ಧ ದೂರು ಕೊಟ್ಟಿರುತ್ತೇನೆ. ನಾನು ನೋಡಿಕೊಳ್ಳುತ್ತಿದ್ದ ಮಕ್ಕಳ ವಿಷಯದಲ್ಲಿ ನಮ್ಮ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿ ಮಧ್ಯೆ ಗಲಾಟೆಯಾಗಿದೆ ಎಂದರೆ ಸರಿಯಲ್ಲ. ಆರೋಪಿಯು ನಾನು ನಡೆಸುತ್ತಿದ್ದ ಅನಾಥಶ್ರಮಕ್ಕೆ ಸಾಕಷ್ಟು ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ಅಲ್ಲಿಂದ ವರ್ಗವಾಗಿ ಬಂದ ನಂತರ ಸಹ ನಾನು ಆರೋಪಿಯಲ್ಲಿ ಸಹಾಯವನ್ನು ಕೇಳಿದ್ದೆನು ಮತ್ತು ಆರೋಪಿಯು ನಾನು ಸರಿಯಿಲ್ಲ ಎಂದು ಹೇಳಿ ಸಹಾಯ ಮಾಡಲು ನಿರಾಕರಿಸಿದ ಕಾರಣ ಸುಳ್ಳು ದೂರನ್ನು ಆರೋಪಿಯ ವಿರುದ್ಧ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು

ಸಿಸ್ಟರ್.ಥೆರೆಸಾರವರಿಗೆ ಯಾವುದೇ ಸಂಬಂಧವಿಲ್ಲ ಇಲ್ಲದೇ ಇದ್ದರು ಅವರ 2 ಸಹಿಗಳನ್ನು ಫೋರ್ಜರಿ ಮಾಡಿ ಈ ಸುಳ್ಳು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಬೇಕು ಮತ್ತು ಅವಮಾನ ಮಾಡಬೇಕು ಎಂಬ ಉದ್ದೇಶದಿಂದ ಸುಳ್ಳು ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ದೂರಿನಿಂದ ಅವರಿಗೆ ನೀಡಬೇಕಾದ ಮುಂಬಡ್ತಿಯನ್ನು ತಡೆಹಿಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.